# 29

# ಸೂಚಕ ಕಾರ್ಯಕ್ಕಾಗಿ ಕೇಳುತ್ತಿರುವದು

# (12:38-50)

ಯೇಸುವಿನ ಅಧಿಕಾರದ ಕುರಿತಾದ ಚರ್ಚೆ ಉತ್ತುಂಗಕ್ಕೇರಿ ಯೆಹೂದ್ಯ ನಾಯಕರು ಸೂಚಕಕಾರ್ಯವನ್ನು ಕೇಳುತ್ತಿದ್ದರು. ಆತನ ಅದ್ಭುತ ಕಾರ್ಯವಾಗಲಿ ಇಲ್ಲವೆ ಆತನ ವಾದವಾಗಲಿ ಅವರಿಗೆ ತೃಪ್ತಿಯನ್ನು ತರಲಿಲ್ಲ. ಆತನು ದೇವರಿಂದ ಬಂದವನು ಮತ್ತು ದೈವೀಕ ಅಧಿಕಾರದ ಮೇಲೆ ಕಾರ್ಯ ಮಾಡುವವನು ಎಂಬುದಕ್ಕೆ ಅವರಿಗೆ ದೊಡ್ಡ ಸಾಕ್ಷಿ ಬೇಕಾಗಿತ್ತು.

## ಯೆಹೂದ್ಯ ನಾಯಕರ ಬೇಡಿಕೆ (12:38-42)

**[38]ಆಗ ಶಾಸ್ತ್ರಿಗಳಲ್ಲಿಯೂ ಫರಿಸಾಯರಲ್ಲಿಯೂ ಕೆಲವರು - ಬೋಧಕನೇ, ನಿನ್ನಿಂದಾಗುವ ಒಂದು ಸೂಚಕಕಾರ್ಯವನ್ನು ನೋಡಬೇಕೆಂದು ನಮಗೆ ಆಪೇಕ್ಷೆಯದೆ ಎಂದು ಆತನನ್ನು ಕೇಳಲಾಗಿ ಆತನು ಅವರಿಗೆ ಉತ್ತರಕೊಟ್ಟದ್ದೇನೆಂದರೆ [39]ವ್ಯಭಿಚಾರಿಣಿಯಂತಿರುವ ಈ ಕೆಟ್ಟ ಸಂತತಿಯು ಸೂಚಕಕಾರ್ಯವನ್ನು ನೋಡಬೇಕೆಂದು ಅಪೇಕ್ಷಿಸುತ್ತದೆ. ಆದರೆ ಯೋನನೆಂಬ ಪ್ರವಾದಿಯಲ್ಲಿ ಆದ ಸೂಚಕಕಾರ್ಯವೇ ಹೊರತು ಬೇರೆ ಯಾವದೂ ಇದಕ್ಕೆ ಸಿಕ್ಕುವದಿಲ್ಲ.**
**[40]ಅಂದರೆ ಯೋನನು ಹೇಗೆ ಮೂರು ದಿನ ರಾತ್ರಿ ಹಗಲು ದೊಡ್ಡ ಮೀನಿನ ಹೊಟ್ಟೆಯೊಳಗೆ ಇದ್ದನೋ, ಹಾಗೆಯೇ ಮನುಷ್ಯಕುಮಾರನು ಮೂರು ದಿನ ರಾತ್ರಿ ಹಗಲು ಭೂಗರ್ಭದೊಳಗೆ ಇರುವನು. [41]ನ್ಯಾಯ ವಿಚಾರಣೆಯಲ್ಲಿ ನಿನೆವೆ ಪಟ್ಟಣದವರು ಈ ಸಂತತಿಯವರೊಂದಿಗೆ ನಿಂತು ಇವರನ್ನು ಅಪರಾಧಿಗಳೆಂದು ಹೇಳುವರು; ಅವರು ಯೋನನು ಸಾರಿದ ವಾಕ್ಯವನ್ನು ಕೇಳಿ ದೇವರಕಡೆಗೆ ತಿರುಗಿಕೊಂಡರು; ಆದರೆ ಇಲ್ಲಿ ಯೋನನಿಗಿಂತಲೂ ಹೆಚ್ಚಿನವನಿದ್ದಾನೆ.**
**[42]ದಕ್ಷಿಣದೇಶದ ರಾಣಿಯು ನ್ಯಾಯವಿಚಾರಣೆಯಲ್ಲಿ ಈ ಸಂತತಿಯವರೊಂದಿಗೆ ಎದ್ದು ನಿಂತು ಇವರನ್ನು ಅಪರಾಧಿಗಳೆಂದು ಹೇಳುವಳು; ಆಕೆಯು ಸೊಲೊಮೋನನ ಜ್ಞಾನವನ್ನು ತಿಳುಕೊಳ್ಳುವದಕ್ಕೆ ಭೂಮಿಯ ಕಟ್ಟಕಡೆಯಿಂದ ಬಂದಳು; ಆದರೆ ಇಲ್ಲಿ ಸೊಲೊಮೋನನಿಗಿಂತಲೂ ಹೆಚ್ಚಿನವನಿದ್ದಾನೆ.**

**ವಚನ 38.** ಯೇಸು ಮಾಡಿದ ಸ್ವಸ್ಥತೆಯ ಮತ್ತು ದೆವ್ವಗಳನ್ನು ಬಿಡಿಸುವದರೊಂದಿಗೆ ಯೆಹೂದ್ಯ ನಾಯಕರು ಪ್ರಭಾವಿತರಾಗಲಿಲ್ಲ. ಬಹುಶಃ ಅವರು ಆತನು ಏನು ಮಾಡಿದ್ದಾನೆ ಎಂಬುದನ್ನು ಲಕ್ಷಿಸಲಿಲ್ಲ ಯಾಕೆಂದರೆ ಆ ದಿನಗಳಲ್ಲಿ ಜನರನ್ನು ಮೋಸಗೊಳಿಸಲು ತಾವೂ ಸಹ ಇಂತಹ ಅದ್ಭುತಗಳನ್ನು ಮಾಡಬಲ್ಲೆವು ಎಂದು ನಟಿಸುವ ಜನರು ಇದ್ದರು (ನೋಡಿರಿ ಅಪೊಸ್ತಲರ ಕೃತ್ಯಗಳು 8:9-13; 13:6-11; 19:13-20). ಅವರು ಯೇಸುವಿನಿಂದ **ಸೂಚಕಕಾರ್ಯವನ್ನು** (*sēmeion*) ಮಾಡಲು ಕೇಳಿದರು. ಅದ್ಭುತಗಳು "ಸೂಚಕಕಾರ್ಯ" ಆಗಿದ್ದವು ಅದರಿಂದ ಆ ವ್ಯಕ್ತಿ ದೇವರಿಂದ ಕಳುಹಿಸಲ್ಪಟ್ಟವನು ಎಂದು ಗುರುತಿಸಬಹುದಾಗಿತ್ತು (ಮಾರ್ಕ 16:14-18; ಯೋಹಾನ 1:29-34; 3:2; 20:30, 31). ಸೂಚಕ ಕಾರ್ಯಗಳನ್ನು ಎಚ್ಚರಿಕೆ ಮತ್ತು ಸತ್ಯವನ್ನು ದೃಢಪಡಿಸಲು ಸಹ ಉಪಯೋಗಿಸುತ್ತಿದ್ದರು (ನ್ಯಾಯಸ್ಥಾಪಕರು 6:17, 18, 36-40; ಯೆಶಾಯ 7:10-17; ಇಬ್ರಿಯ 2:1-4).

ಆತನ ಸೇವೆಯುದ್ದಕ್ಕೂ ಆತನು ತನ್ನ ಅದ್ಭುತ ಕಾರ್ಯಗಳನ್ನು ಪ್ರೇಕ್ಷಕರ ಕೋರಿಕೆಯ ಮೇರೆಗೆ ಮನೋರಂಜನೆಯಾಗಿ ಉಪಯೋಗಿಸಲು ನಿರಾಕರಿಸಿದನು. ಇಂಥಹಾ ಪ್ರದರ್ಶನವನ್ನು ಒದಗಿಸುವದು ದೇವರನ್ನು "ಪರೀಕ್ಷಿಸಿದ" ಹಾಗೆ ಎಂಬುದು ಆತನ ದೃಷ್ಟಿಕೋನವಾಗಿತ್ತು (ನೋಡಿರಿ 4:5-7; KJV).

ಮೋಶೆಯನೊಂದಿಗೆ ಫರೋಹನನು ವರ್ತಿಸಿದ ರೀತಿಯಲ್ಲೇ ಕಠೋರಿಗಳಾದ **ಫರಿಸಾಯರು** ಯೇಸುವಿನೊಂದಿಗೆ ವರ್ತಿಸಿದರು (ವಿಮೋಚನಕಾಂಡ 4-14); ಕ್ರಿಸ್ತನು ಈಗಾಗಲೆ ಅವರ ಮಧ್ಯದಲ್ಲಿ ತೋರಿಸಿದ ಅದ್ಭುತಗಳ ಸೂಚನೆಯನ್ನು ನಿರಾಕರಿಸಿದರು. ಈ ಸಮಯದಲ್ಲಿ ಫರಿಸಾಯರು ಯೇಸು ದೇವರ ಬಲದಿಂದ ಮತ್ತು ಅನುಮತಿಯಿಂದ ಮಾಡುತ್ತಾನೆ ಎಂಬುದನ್ನು ನಿರಾಕರಿಸುವ ಸೂಚನೆಗಳನ್ನು ಹುಡುಕುತ್ತಿರಬಹುದು. ಇತರ ವಾಕ್ಯಭಾಗದಲ್ಲಿ ಇದನ್ನು "ಆಕಾಶದಲ್ಲಿ ಒಂದು ಸೂಚಕಕಾರ್ಯ" ಎಂದು ಉಲ್ಲೇಖಿಸಲಾಗಿದೆ (ಮಾರ್ಕ 8:11; ಲೂಕ 11:16). ಬಹುಶಃ ಅವರು ಪರಲೋಕದ ಮನ್ನದ ರೀತಿಯಲ್ಲಿ ಯಾವುದಾದರೊಂದನ್ನು ನೋಡಲು ಬಯಸಿರಬಹುದು (ವಿಮೋಚನಕಾಂಡ 16:1-36). ಸೂರ್ಯನು ಸ್ತಬ್ಧನಾದದ್ದು (ಯೆಹೋಶುವ 10:12-14), ಅಥವಾ ದೇವರು ಆಕಾಶದಿಂದ ಬೆಂಕಿಯನ್ನು ಕಳುಹಿಸಿದ್ದು (1 ಅರಸುಗಳು 18:30-40). ಆತನು ಅವರ ಬೇಡಿಕೆಯನ್ನು ಇಡೇರಿಸಿದರೂ ಫರಿಸಾಯರು ಯೇಸುವನ್ನು ನಂಬುತ್ತಿದ್ದರು ಎನ್ನುವದರಲ್ಲಿ ಸಂಶಯವಿತ್ತು. ನಂತರ ಪೌಲನು ಇಂಥಹಾ ಸೂಚಕ ಕಾರ್ಯಗಳನ್ನು ಕೇಳಿಕೊಂಡ ಯೆಹೂದ್ಯರ ನಡತೆಯನ್ನು ಟೀಕಿಸುತ್ತಾನೆ (1 ಕೊರಿಂಥ 1:22).

**ವಚನಗಳು 39, 40.** ಯೇಸು ತನ್ನ ಸಮಯದಲ್ಲಿದ್ದ ಜನರನ್ನು **ವ್ಯಭಿಚಾರಣಿಯಂತಿರುವ ಈ ಕೆಟ್ಟ ಸಂತತಿ** ಎಂದು ಕರೆಯುತ್ತಾನೆ. ಅವರು "ಕೆಟ್ಟ" ಜನರಾಗಿದ್ದರು ಯಾಕೆಂದರೆ ಅವರು "ನೈತಿಕವಾಗಿ ಭ್ರಷ್ಟರಾಗಿದ್ದರು." ಅವರು "ವ್ಯಭಿಚಾರಿ" ಗಳಾಗಿದ್ದರು, ಆತ್ಮೀಕವಾಗಿ ಹೇಳು ವದಾದರೆ ಅವರು ದೇವರಿಗೆ ಅಪನಂಬಿಗಸ್ಥರಾಗಿದ್ದರು. ಈ ತರದ ಭಾಷೆಯನ್ನು ಹಳೆ ಒಡಂಬಡಿಕೆಯಲ್ಲಿ ಇಸ್ರಾಯೇಲರು ಯೆಹೋವನೊಂದಿಗೆ ಒಪ್ಪಂದಗಳನ್ನು ಮುರಿಯುವಾಗ ಈ ಪದಗಳನ್ನು ಉಪಯೋಗಿಸಲಾಗಿದೆ (ಯೆಶಾಯ 50:1; ಯೆರೆಮಿಯ 3:8; 13:27; 31:32; ಯೆಹೆಜ್ಕೇಲ 16:32-43; ಹೊಶೆಯ 2:1-20). ಇದೇ ಪದಪ್ರಯೋಗ ಅಪನಂಬಿಗಸ್ತ ಕ್ರೈಸ್ತರಿಗೆ ಸಹ ಅನ್ವಯಿಸುತ್ತದೆ (ಯಾಕೋಬ 4:4), ಸಭೆಯು ಕ್ರಿಸ್ತನ ವಧುವಾಗಿದೆ (ಎಫೆಸ 5:22-33).

ಯೇಸು ವಿಶೇಷವಾದ ಸೂಚಕಕಾರ್ಯವನ್ನು ನೋಡಬೇಕೆಂಬ ಅವರ ಬೇಡಿಕೆಯನ್ನು ತಿರಸ್ಕರಿಸಿದ್ದಾಗ್ಯೂ, ಆತನು ಪ್ರವಾದಿಯಾದ **ಯೋನನಲ್ಲಿ ಆಗಿರುವ ಸೂಚಕಕಾರ್ಯ** ವಾಗ್ದಾನವನ್ನು ಮಾಡುತ್ತಾನೆ. ಹಳೆ ಒಡಂಬಡಿಕೆಯ ಪ್ರವಾದಿಗಳ ಅನುಭವ, ಕ್ರಿಸ್ತನ ಮರಣ, ಹೂಣಿಡುವಿಕೆ, ಮತ್ತು ಪುನರುತ್ಥಾನದ ವಿಧಕ್ಕೆ ಉಪಯೋಗವಾಗಿದೆ. **ಯೋನನು** ದೊಡ್ಡ ಮೀನಿನ ಹೊಟ್ಟೆಯಲ್ಲಿ **ಮೂರು ರಾತ್ರಿ ಮತ್ತು ಮೂರು ಹಗಲು ಇದ್ದಂತೆಯೇ** (ಯೋನ 1:17), ಯೇಸು ಕೂಡ ಅದಕ್ಕೆ ಸಮನಾಗಿರುವಂತೆ **ಭೂಗರ್ಭದೊಳಗೆ** ಅಷ್ಟೇ ಸಮಯದ ಅವಧಿಯಲ್ಲಿ ಇರುವನು. ಯೋನನು "ಪಾತಾಳದ ಗರ್ಭದೊಳಗಿಂದ" ಕೂಗುತ್ತಿದ್ದೇನೆ ಎಂದು ತನ್ನ ಅಲಂಕಾರಿಕವಾಗಿ ವರ್ಣಿಸುತ್ತಾನೆ (ಯೋಹಾನ 2:2). ಅದೇ ರೀತಿಯಲ್ಲಿ, ಯೇಸು ನಿಜವಾಗಿ ಭೂಮಿಯಲ್ಲಿಯೇ ಹೂಣಲ್ಪಟ್ಟನು (ನೋಡಿರಿ ಎಫೆಸ 4:9).

ಈ ವಾಕ್ಯಭಾಗದಿಂದ ಕೆಲವೊಂದು ತೊಂದರೆಗಳು ಉದ್ಭವಿಸುತ್ತವೆ. ಮೊದಲನೆಯದಾಗಿ, KJV ಸತ್ಯವೇದ ಯೋನನು "ತಿಮಿಂಗಲಿನ ಹೊಟ್ಟೆಯಲ್ಲಿ" ಇದ್ದನು ಎಂದು ಹೇಳುತ್ತದೆ. ತಿಮಿಂಗಲು ಲೋಕದಲ್ಲಿ ಸಸ್ತನಿ ವರ್ಗಕ್ಕೆ ಸೇರಿದ ಅತೀ ದೊಡ್ಡದಾದ ಪ್ರಾಣಿಯಾಗಿದ್ದಾಗ್ಯೂ, ಒಬ್ಬ ಜೀವಂತ ಮನುಷ್ಯನನ್ನು ಮೂರು ದಿನಗಳ ಕಾಲ ಹೊಟ್ಟೆಯಲ್ಲಿ ಇಟ್ಟುಕೊಳ್ಳಲು ಅವುಗಳ ಹೊಟ್ಟೆ ಬಹಳ ಚಿಕ್ಕದ್ದಾಗಿರುತ್ತದೆ. *Kētos,* ಎಂಬ ಪದವನ್ನು **ದೊಡ್ಡ**

**ಮೀನು** (ಸಮುದ್ರದ ರಾಕ್ಷಸ ಎಂದು NASB) ಎಂದು ಅನುವಾದಿಸುತ್ತದೆ, ಇದು "ನಿರ್ದಿಷ್ಟ ವಾದ ಜಾತಿಯನ್ನು" ಹೇಳಿರುವದಿಲ್ಲ.[1] ಇದನ್ನು KJV ಅನುವಾದಿಸಿದ ಹಾಗೆ ತಿಮಿಂಗಲನ್ನೇ ಉಲ್ಲೇಖಿಸಬೇಕಾದ ಅವಶ್ಯಕತೆಯಿಲ್ಲ. ಇನ್ನು ಹೆಚ್ಚಾಗಿ, ಕೆಲವೊಂದು ದೊಡ್ಡ ಸಮುದ್ರ ಜೀವಿಗಳು ಸಂಪೂರ್ಣ ಮನುಷ್ಯನನ್ನು ನುಂಗುವ ಸಾಮರ್ಥ್ಯವನ್ನು ಹೊಂದಿವೆ ಎಂಬುದು ಪ್ರಮಾಣಿಕರಿಸಿದ ಸಂಗತಿಯಾಗಿದೆ ಇದರಲ್ಲಿ ತಿಮಿಂಗಲ ಬಿಳಿ ತಿಮಿಂಗಲು ಶಾರ್ಕ್ ಬಿಳಿ ಶಾರ್ಕ್ ಇವೆಲ್ಲವುಗಳನ್ನು ಬರುತ್ತವೆ. ಸಮುದ್ರ ಜೀವಿಗಳ ನಿಖರವಾದ ವಿಧವನ್ನು ಗುರುತಿಸಲು ಸಾಧ್ಯವಾಗದೇ ಇರಬಹುದು ಇಲ್ಲವೇ ಅವಶ್ಯವಿಲ್ಲದೇ ಇರಬಹುದು "ಯೋನನನ್ನು ನುಂಗಲು … ದೇವರು ಅಪ್ಪಣೆ ಕೊಟ್ಟನು" (ಯೋಹಾನ 1:17).

ತೊಂದರೆಗೆ ಕಾರಣವಾದ ಎರಡನೇ ಅಂಶವೇನೆಂದರೆ ಯೇಸು ತಾನು ಮೂರು **ಹಗಲು ಮೂರು ರಾತ್ರಿ** ಭೂಗರ್ಭದಲ್ಲಿದ್ದೆನೆಂದು ಪ್ರಕಟಿಸಿರುವದು. ಆತನು ಹೇಳಿರುವದು ಕೆಲವು ಬೇರೆ ಬೇರೆ ಅರ್ಥವಿವರಣೆಯನ್ನು ನೀಡುತ್ತದೆ. ಒಂದು ವಿವರಣೆ ಏನೆಂದರೆ ಯೇಸು ಶುಕ್ರವಾರಕ್ಕೆ ಬದಲಾಗಿ ಗುರುವಾರ ಕ್ರೂಜೆಗೆ ಹಾಕಲ್ಪಟ್ಟನು, ಪಸ್ಕ ಹಬ್ಬದ ದಿನಕ್ಕಿಂತ ಮುಂಚಿನ ನಿರ್ಧಿಷ್ಟವಾದ ಶುಕ್ರವಾರ "ವಿಶೇಷವಾದ ಸಬ್ಬತ್" ಎಂದು ನಿಶ್ಚಯಿಸಲಾಗಿತ್ತು. ಏನೇಯಾದರೂ, ಈ ಅವಲೋಕನವು ಮೂರು ಸಂಪೂರ್ಣ ದಿನಗಳಿಗೆ ಕಡಿಮೆಯಾಗುತ್ತದೆ. ಈ ಸಮಸ್ಯೆಯನ್ನು ಸರಿಪಡಿಸಲು, ಕ್ರೂಜೆಗೆ ಹಾಕಿದ್ದು ನಿಜವಾಗಿಯೂ ಬುಧವಾರದಂದು ಎಂದು ವಾದಿಸಲಾಗಿದೆ. ಇದು ಕರ್ತನನ್ನು ಸಂಪೂರ್ಣವಾಗಿ ಮೂರು ರಾತ್ರಿ, ಮೂರು ಹಗಲು ಭೂಗರ್ಭದಲ್ಲಿ ಇದ್ದಾನೆಂದು ತಿಳಿಸುತ್ತದೆ. ಆದಾಗ್ಯೂ, ಗಂಭೀರವಾಗಿ ಪರಿಗಣಿಸಲು ಈ ಸಲಹೆಯು ಅನೇಕ ಸಮಸ್ಯೆಗಳಿಂದ ತುಂಬಿದೆ. ಅದಕ್ಕೂ ಹೆಚ್ಚಾಗಿ, ಯೆಹೂದ್ಯರ "ಸಿದ್ಧತೆ ದಿನ" (*paraskeuē*) ಎಂದು ಸೂಚಿಸುವ ಪದ - ಅದುವೆ ಕ್ರಿಸ್ತನು ಮರಣಹೊಂದಿದ ದಿನವಾಗಿದೆ (ಮಾರ್ಕ 15:42, 43; ಲೂಕ 23:46, 54; ಯೋಹಾನ 19:14, 30, 33) - ಆಧುನಿಕ ಗ್ರೀಕ್‌ನಲ್ಲಿ "ಶುಕ್ರವಾರ" ಎಂಬ ಅರ್ಥವನ್ನು ನೀಡಲು ಮಾತ್ರ ಉಪಯೋಗಿಸಲಾಗಿದೆ. ನಿಜವಾಗಿಯೂ, ಯೇಸುವಿನ ಹೇಳಿಕೆಯಾದ ಮೂರು ಹಗಲು ಮತ್ತು ರಾತ್ರಿ ನಿಖರವಾದ ಸಮಯದ ಸರಣಿಯಲ್ಲಿ ಹೊಂದಿಸಲು ಪ್ರಯತ್ನಿಸಿದರೆ ವಿಫಲವಾಗುತ್ತದೆ. ಈ ಸೂಚಕ ಕಾರ್ಯದ ಯಾವುದೇ ನಿಜವಾದ ಮಾರ್ಗ ನಿಶ್ಚಯವಾಗಿಯೂ ಚರ್ಚೆಗೆ ಯೋಗ್ಯವಲ್ಲದ ಪ್ರಶ್ನೆಯಾಗಿದೆ.

"ಮೂರು ಹಗಲು ಮತ್ತು ಮೂರು ರಾತ್ರಿಗಳು" ಎಂಬ ಶಬ್ದ ಪ್ರಯೋಗದ ಸಮಸ್ಯೆಗೆ ಉತ್ತಮವಾದ ವಿವರಣೆ ಹಗಲಿನ ಅಥವಾ ರಾತ್ರಿಯ ಯಾವುದೇ ಭಾಗವಾಗಿರಬಹುದು. ಯೆಹೂದ್ಯ ಸಾಹಿತ್ಯ ಈ ರೀತಿಯಾಗಿ ಅವಲೋಕಿಸುತ್ತದೆ, ದಿನದ ಯಾವುದೇ ಭಾಗವನ್ನು ಸಂಪೂರ್ಣ ದಿನ ಎಂಬುದಾಗಿ ಪರಿಗಣಿಸುತ್ತದೆ (ಆದಿಕಾಂಡ 42:17, 18; 1 ಸಮುವೇಲ 30:12, 13; 1 ಅರಸುಗಳು 20:29; 2 ಪೂರ್ವಕಾಲವೃತ್ತಾಂತ 10:5, 12; ಎಸ್ತೇರಳು 4:16; 5:1).[2]

ನಾವು ದಿನದ ಅಥವಾ ರಾತ್ರಿಯ ಯಾವುದೇ ಭಾಗವನ್ನು ಸಂಪೂರ್ಣ ಹಗಲು ಅಥವಾ ರಾತ್ರಿಯಾಗಿ ತೆಗೆದುಕೊಂಡರೂ, ಅಲ್ಲಿ ಕೇವಲ ಎರಡು ರಾತ್ರಿಗಳು ಮಾತ್ರ ಇರುತ್ತದೆ. ಆದುದರಿಂದ, ಸಾಕ್ಷಿ ಆಧಾರದ ಮೇಲೆ, ನಾವು ಭಾಷೆಗೆ ಅಷ್ಟು ಒತ್ತು ನೀಡಬಾರದು. ಸುವಾರ್ತಾ ಬರಹಗಾರರು "ಮೂರನೆಯ ದಿನ" ಎಂಬ ವಾಕ್ಯಾಂಗವನ್ನು ಉಪಯೋಗಿ ಸಿದ್ದಾರೆ (16:21; 17:23; 20:19) ಮತ್ತು "ಮೂರು ದಿನದ ತರುವಾಯ" ಎಂದು (27:63, 64; ಮಾರ್ಕ 8:31; 9:31; 10:34) ಪರಸ್ಪರ ಬದಲಾಗಿ ಸಹ ಉಪಯೋಗಿಸಿದ್ದಾನೆ.

ಯೋನನು ಮೀನಿನ ಹೊಟ್ಟೆಯೊಳಗೆ ಇದ್ದಾಗ ದೈಹಿಕವಾಗಿ ಮರಣ ಹೊಂದಿರಲಿಲ್ಲವೆಂದು ವೇದ ವಾಕ್ಯವು ಸ್ಪಷ್ಟಪಡಿಸುತ್ತದೆ, ಆತನು ಮೀನಿನ ಒಳಗಿನಿಂದ ದೇವರಿಗೆ ಪ್ರಾರ್ಥಿಸಿದನು (ಯೋನ 2:1). ಯೇಸು ಪ್ರವಾದಿಯಾದ ಅನುಭವವನ್ನು ತನ್ನ ಸ್ವಂತ ಪುನರುತ್ಥಾನಕ್ಕೆ

ಉಪಯೋಗಿಸಲು ಯೋನನು ಸಾಯಬೇಕಾಗಿರಲಿಲ್ಲ. ಯೋನನು "ಮೂರು ಹಗಲು ಮತ್ತು ರಾತ್ರಿ" ಮೀನಿನ ಹೊಟ್ಟೆಯೊಳಗೆ ಇದ್ದು ನಂತರ ಜೀವಂತವಾಗಿ ಹೊರಬಂದನು ಎಂದು ಯೇಸು ಸರಳವಾಗಿ ಹೇಳುತ್ತಾನೆ, ಅದರಂತೆ ತಾನೂ ಸಹ ಭೂಗರ್ಭದಲ್ಲಿದ್ದು, ಜೀವಂತವಾಗಿ ಎದ್ದು ಬರುತ್ತೇನೆ ಎಂದು ಹೇಳುತ್ತಾನೆ.

**ವಚನ 41.** ಮೀನಿನೊಳಗೆ ಇರುವ ಈ ಅನುಭವದ ನಂತರ **ಯೋನನು ನಿನವೆ** ಪಟ್ಟಣಕ್ಕೆ ಹೋಗಿ ಬೋಧಿಸಿದನು. ಅದರ ನಿವಾಸಿಗಳು ಆ ದಿನಗಳಲ್ಲಿ ಅತೀ ದುಷ್ಟರಾಗಿದ್ದರು (ಯೋನ 1:2). ನಿನವೆ ಅನ್ಯ ಜನರ ಪಟ್ಟಣವಾಗಿತ್ತು, ಅಶೂರ್ಯದ ರಾಜಧಾನಿಯಾಗಿತ್ತು. ಯೇಸುವಿನ ಕಾಲದಲ್ಲಿದ್ದ ಕೆಟ್ಟ ಜನಾಂಗವಾದ ಯೆಹೂದ್ಯರನ್ನು ನಿನವೆ ಪಟ್ಟಣದ **ಜನರು ಹೇಗೆ ಖಂಡಿಸಲ್ಪಟ್ಟರು**? ಈ ಸನ್ನಿವೇಶದಲ್ಲಿ "ಖಂಡಿಸು" ಎಂಬ ಪದದ ಅರ್ಥ "ನ್ಯಾಯತೀರ್ಪಿಗೆ ತಳಹದಿಯನ್ನು ಒದಗಿಸುವದು."[3] ಯೋನನು ಕೊನೆಗೆ ನಿನವೆ ಪಟ್ಟಣಕ್ಕೆ ಹೋಗಿ "ಇನ್ನೂ ನಾಲ್ವತ್ತು ದಿನಗಳಾದ ಮೇಲೆ ನಿನವೆಯು ಕೆಡವಲ್ಪಡುವದು" (ಯೋನ 3:4) ಎಂದು ಸಾರುವಾಗ, ನಿನವೆ ಪಟ್ಟಣದ ಜನರು ಅರಸನಿಂದ ಗುಲಾಮನವರೆಗೆ ಗೋಣಿ ತಟ್ಟನ್ನು ಹೊದ್ದುಕೊಂಡು ಬೂದಿಯಲ್ಲಿ ಕುಳಿತು ಪಶ್ಚಾತಾಪ ಪಟ್ಟರು (ಯೋನ 3:5-10). ಯೇಸು, **ಯೋನನಿಗಿಂತಲೂ ಹೆಚ್ಚಿನವನು,** ಬಂದಿದ್ದಾನೆ; ಆದರೆ ಆತನ ಉಪದೇಶವನ್ನು ಕೇಳಿದ ಆತನ ಜನಾಂಗದವರು ಪಶ್ಚಾತಾಪ ಪಡಲಿಲ್ಲ. "ಹೆಚ್ಚಿನವನು" (*pleion*) ಎನ್ನುವ ಗ್ರೀಕ್ ಪದ ನಪುಂಸಕ ಲಿಂಗದಲ್ಲಿದ್ದರು, ಬಹುಶಃ ಕ್ರಿಸ್ತನನ್ನು ಸೂಚಿಸುತ್ತದೆ (12:6ರ ಮೇಲಿನ ವ್ಯಾಖ್ಯಾನ ನೋಡಿರಿ) ಯೋನನ **ಉಪದೇಶ** ಅದ್ಭುತಗಳನ್ನು ಹೊಂದಿರಲಿಲ್ಲ ಮತ್ತು ಜನರು ಅದನ್ನು ನಂಬಿದರು, ಆದರೆ ಕ್ರಿಸ್ತನ ಉಪದೇಶದ ಜೊತೆಗೆ ಅಂಸಖ್ಯಾತ ಅದ್ಭುತಗಳು ಆಗಿದ್ದವು ಆದರೆ ಜನರು ಅದನ್ನು ತಿರಿಸ್ಕರಿಸಿದರು.

**ವಚನ 42.** ಮತ್ತೊಮ್ಮೆ, ಯೇಸು ತನ್ನ ಶೋತ್ರುಗಳ ತಪ್ಪನ್ನು ಸಾಬೀತು ಪಡಿಸಲು ಅನ್ಯಜನರ ಉದಾಹರಣೆಯನ್ನು ಉಪಯೋಗಿಸುತ್ತಾನೆ. **ದಕ್ಷಿಣ ದೇಶದ ರಾಣಿ** 1 ಅರಸುಗಳು 10ರಲ್ಲಿ ಬರುವ "ಶೆಬದ ರಾಣಿ"ಯನ್ನು ಸೂಚಿಸುತ್ತಾನೆ. ಪ್ರಾಚೀನ ದೇಶವಾದ ಶೆಬಾ ಅರೇಬಿ ಯಾದ ದಕ್ಷಿಣದಲ್ಲಿದೆ, ಯೆರೂಸಲೇಮಿನಿಂದ ಆಗ್ನೇಯ ದಿಕ್ಕಿಗೆ ಸುಮಾರು 1,200 ಮೈಲು ಅಂತರದಲ್ಲಿದೆ. ಆವಳು **ಈ ಜನಾಂಗವನ್ನು** ಏಕೆ **ಖಂಡಿಸಬೇಕು**? ಅವರು **ಸೊಲೊಮೋನನ ಜ್ಞಾನವನ್ನು ತಿಳುದುಕೊಳ್ಳುವದಕ್ಕೆ** ಮತ್ತು ಆತನ ರಾಜ್ಯವೈಭವವನ್ನು ನೋಡಲು ಬಹಳ ದೂರದಿಂದ ಬಂದಿದ್ದಳು (1 ಅರಸುಗಳು 10:1-10; ನೋಡಿರಿ 4:34). ಆದರೆ, ಯೇಸುವಿನ ಜನಾಂಗವು ಆತನು ಯಾರೆಂಬುದನ್ನು ಗುರುತಿಸಲು ಅಥವಾ ಆತನ ಜ್ಞಾನವನ್ನು ಸ್ವೀಕರಿಸಲು ವಿಫಲವಾಯಿತು. ಅವರು ಆತನನ್ನು ಆಲಿಸಲು ಅಥವಾ ಆತನ ಬೋಧನೆಗಳಿಗೆ ವಿಧೇಯ ರಾಗಲು ಸ್ವಲ್ಪ ಪ್ರಯತ್ನ ಮಾಡಿದರು. ಮತ್ತೆ, ನಪುಂಸಕ ಲಿಂಗದ ಕ್ರಿಯಾ ವಿಶೇಷಣವನ್ನು *pleion,* ಉಪಯೋಗಿಸಿ ಯೇಸು ತಾನು **ಸೊಲೊಮೋನನಿಗಿಂತಲೂ ಹೆಚ್ಚಿನವನಾಗಿದ್ದಾನೆ** ಎಂಬುದನ್ನು ಒತ್ತಿ ಹೇಳಿದ್ದಾನೆ (12:6, 41ರ ಮೇಲಿನ ವ್ಯಾಖ್ಯಾನ ನೋಡಿರಿ). ಯೇಸುವಿನ ಜ್ಞಾನ, ದೇವರು ಶರೀರದಾರಿಯಾಗಿದ್ದಾನೆ, ಹಿಂದಿನ ಕಾಲದಲ್ಲಿ ಇಸ್ರಾಯೇಲ್ಯರ ಅತ್ಯಂತ ಜ್ಞಾನಿಯಾದ ಅರಸನಿಗಿಂತ ಎಷ್ಟೋ ಮಿಗಿಲಾಗಿತ್ತು.

## ಕೆಟ್ಟ ಸಂತಾನ ಕುರಿತ ಸಾಮ್ಯ (12:43-45)

**43ದೆವ್ವವು ಮನುಷ್ಯನನ್ನು ಬಿಟ್ಟುಹೋದ ಮೇಲೆ ವಿಶ್ರಾಂತಿಯನ್ನು ಹುಡುಕುತ್ತಾ ನೀರಿಲ್ಲದ ಸ್ಥಳಗಳಲ್ಲಿ ತಿರುಗಾಡುತ್ತದೆ. 44ವಿಶ್ರಾಂತಿ ಸಿಕ್ಕದ ಕಾರಣ ಅದು - ನಾನು ಬಿಟ್ಟು ಬಂದ ನನ್ನ ಮನೆಗೆ ತಿರಿಗಿ ಹೋಗುತ್ತೇನೆ ಅಂದುಕೊಂಡು ಬಂದು ಆ ಮನೆ ಒಕ್ಕಲಿಲ್ಲದ್ದೂ ಗುಡಿಸಿ ಅಲಂಕರಿಸಿದ್ದೂ ಆಗಿರುವದನ್ನು ಕಂಡು 45ಹೊರಟು ಹೋಗಿ ತನಗಿಂತ ಕೆಟ್ಟವುಗಳಾದ**

**ಬೇರೆ ಏಳು ದೆವ್ವಗಳನ್ನು ತನ್ನೊಂದಿಗೆ ಕರಕೊಂಡು ಬರುವದು. ಅವು ಒಳಹೊಕ್ಕು ಅಲ್ಲಿ ವಾಸಮಾಡುವವು. ಆಗ ಆ ಮನುಷ್ಯನ ಅಂತ್ಯ ಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗುವದು. ಇದರಂತೆಯೇ ಈ ಕೆಟ್ಟ ಸಂತತಿಗೆ ಆಗುವದು ಅಂದನು.**

**ವಚನಗಳು 43-45.** ದುಷ್ಟ ಆತ್ಮಗಳ ಈ ಸಾಮ್ಯವನ್ನು ಯೇಸು ಶಾಸ್ತ್ರಿಗಳಿಗೆ ಮತ್ತು ಫರಿಸಾಯರಿಗೆ ನೇರವಾಗಿ ಸಂಬೋಧಿಸಿದ್ದಾನೆ (12:38). ಅವರು ಹೊರಭಾಗವನ್ನು ಶುಚಿಮಾಡುವದರಲ್ಲಿ ಜಾಗರೂಕರಾಗಿರುತ್ತಾರೆ, ಆದರೆ ಒಳಗಿನವುಗಳನ್ನು ಶುಚಿಮಾಡುವದರ ಕುರಿತು ಕಾಳಜಿವಹಿಸುವದಿಲ್ಲ (23:25-28). ಅವರು ಆತ್ಮೀಕವಾಗಿ ಕಾಣಿಸಿಕೊಳ್ಳಲು ಶ್ರಮಪಡುತ್ತಿರುವ ಸಮಯದಲ್ಲಿ ತಮ್ಮ ಜೀವಿತವನ್ನೇ ಬದಲಾಯಿಸುವ ದೇವರ ಧರ್ಮಶಾಸ್ತ್ರದ ಅವಶ್ಯಕತೆಗಳನ್ನು ಅಲಕ್ಷಿಸುತ್ತಾರೆ. ಅವರು "ಸಣ್ಣ ವಿಷಯಗಳಲ್ಲಿ ಅಳೆಯುತ್ತಾರೆ" ಅವರು ತಮ್ಮ ಮರುಗು ಸೋಪು ಜೀರಿಗೆಗಳಲ್ಲಿ ಹತ್ತರಲ್ಲೊಂದು ಪಾಲನ್ನು ಕೊಡುವದರಲ್ಲಿ ಕ್ಷುಲಕ ತಪ್ಪುಗಳನ್ನು ಹುಡುಕುತ್ತಾರೆ, ಆದಾಗ್ಯೂ, "ಧರ್ಮಶಾಸ್ತ್ರದಲ್ಲಿ ಗೌರವವಾದದ್ದನ್ನು ಅಂದರೆ ನ್ಯಾಯವನ್ನೂ, ಕರುಣೆಯನ್ನೂ, ನಂಬಿಕೆಯನ್ನೂ ಬಿಟ್ಟು ಬಿಟ್ಟಿದ್ದಾರೆ" ಎಂದು ಯೇಸು ಹೇಳಿದನು (23:23).

ಯೇಸುವಿನ ಎಚ್ಚರಿಕೆ ಇದಾಗಿತ್ತು, ಶಾಸ್ತ್ರಿಗಳು ಮತ್ತು ಫರಿಸಾಯರು ತಮ್ಮ ಮನೆಯನ್ನು ಶುಚಿಗೊಳಿಸಿದರೂ ಅವುಗಳನ್ನು ಖಾಲಿಬಿಡುತ್ತಾರೆ, ಅವರು ತೆಗೆದು ಹಾಕಿದ ಕೆಟ್ಟತನ ಮೊದಲಿಗಿಂತ ಹೆಚ್ಚು ಕೆಟ್ಟದ್ದಾಗಿ ಹಿಂತಿರುಗಿ ಬರುತ್ತದೆ. ಯೇಸು ತನ್ನ ವಿಷಯವನ್ನು ಸಮರ್ಥಿಸಿಕೊಳ್ಳಲು ಮನುಷ್ಯನೊಳಗಿರುವ **ಅಶುದ್ಧ ಆತ್ಮಗಳು** ಆತನನ್ನು ಬಿಟ್ಟುಹೋಗುವ ಉದಾಹರಣೆಯನ್ನು ನೀಡುತ್ತಾನೆ. ಮನುಷ್ಯನಿಂದ ಹೊರಗೆ ಹೋಗುತ್ತವೆ ಎನ್ನುವ ಸಾಮ್ಯವನ್ನು ಹೇಳುವದರ ಮುಖಾಂತರ **ಮನುಷ್ಯನ** ಅಂಶವನ್ನು ಸ್ಪಷ್ಟಮಾಡಿದ್ದಾನೆ. ಹೊರಗೆಹೋಗುತ್ತವೆ (*exerchomai*) ಎನ್ನುವ ಕ್ರಿಯಾಪದವು ದೆವ್ವವು ಮನುಷ್ಯನಿಂದ ಹೊರಗೆ ಓಡಿಸಿಬಿಟ್ಟನು ಎನ್ನುವ ಸನ್ನಿವೇಶದಲ್ಲಿ ಅನೇಕ ಸಾರಿ ಉಪಯೋಗಿಸಲಾಗಿದೆ (17:18; ಮಾರ್ಕ 1:25, 26; 5:8; 7:29; 9:25). ಈ ಮನುಷ್ಯನಿಂದ ಹೊರಗೆ ಹೋದ ಮೇಲೆ, ಅಶುದ್ಧ ಆತ್ಮಗಳು ಹೊಸಮನೆಯನ್ನು ಹುಡುಕಲು ಹೋದವು. ಹೊಸ ಒಡಂಬಡಿಕೆಯ ಕಾಲದ ಯೆಹೂದ್ಯರು, ಅರಬರ್ ಮತ್ತು ಐಗುಪ್ತರು **ನೀರಿಲ್ಲದ ಸ್ಥಳಗಳಲ್ಲಿ** (ಮರುಭೂಮಿ) ದುಷ್ಟ ಆತ್ಮಗಳು ಹುಡುಕುತ್ತಿರುತ್ತವೆ ಎಂಬುದಾಗಿ ಅವರು ನಂಬುತ್ತಿದ್ದರು (ಪ್ರಕಟಣೆ 18:2).[4]

ಯೇಸುವಿನ ಸಾಮ್ಯದಲ್ಲಿ ದೆವ್ವವು ತನಗೆ ಯೋಗ್ಯವಾದ ವಿಶ್ರಾಂತಿಯ ಸ್ಥಳವನ್ನು ಕಾಣದೆ ಮೊದಲಿದ್ದ ಮನೆಗೆ ಹಿಂತಿರುಗಿತು ಮತ್ತು ಒಕ್ಕಲಿಲ್ಲದ್ದು, **ಗುಡಿಸಿ ಅಲಂಕರಿಸಿದ್ದು, ಆಗಿರುವದನ್ನು ಕ್ರಮವಾಗಿ, ಕಂಡುಕೊಳ್ಳುತ್ತದೆ.** ದೆವ್ವವು ಒಳಗೆ ಬರುವದಷ್ಟೇ ಅಲ್ಲ ಅದು ಹೋಗಿ ತನಗಿಂತ ಕೆಟ್ಟವುಗಳಾದ ಬೇರೆ ಏಳು ದೆವ್ವಗಳನ್ನು ತನ್ನೊಂದಿಗೆ ಕರಕೊಂಡು ಬರುವದು ಮತ್ತು ಆ ಬಡ ಮನುಷ್ಯನ ದೇಹದಲ್ಲಿ ಶಾಶ್ವತವಾಗಿ ನೆಲೆಗೊಳ್ಳುವವು. ಆಗ **ಆ ಮನುಷ್ಯನ ಅಂತ್ಯ ಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗುವದು.** ಆ ಸಮಯದಲ್ಲಿ ಇದು ಅಂದಿನ ದಿನಗಳಲ್ಲಿ ಹೇಳುವದು ಸಾಮಾನ್ಯವಾಗಿತ್ತು (27:64; 2 ಪೇತ್ರ 2:20). ಇಸ್ರಾಯೇಲಿನಲ್ಲಿ ಯಾರು ಕ್ರಿಸ್ತನನ್ನು ನಿರಾಕರಿಸಿದರೋ ಅವರು ಭಯಂಕರವಾಗಿ ದಂಗೆ ಹೇಳುವ ಪರಿಸ್ಥಿತಿಯುಂಟಾಯಿತು ಇದೆಲ್ಲವು ಇತಿಹಾಸಕ್ಕೆ ಸಂಬಂಧಪಡುತ್ತದೆ. ಅಂತಿಮವಾಗಿ, ಕ್ರಿ.ಶ. 70ರಲ್ಲಿ ಅವರ ನಿರಾಕರಣೆಯ ಫಲವಾಗಿ ಯೆರೂಸಲೇಮ ಮತ್ತು ಯೆರೂಸಲೇಮ ದೇವಾಲಯ ನಾಶಮಾಡಲ್ಪಟ್ಟಿತು (ನೋಡಿರಿ 24:1-28).

## ಮುಕ್ತಾಯದ ನುಡಿಗಳು: ಯೇಸುವಿಗೆ ನಿಜವಾದ ಸಂಬಂಧ (12:46-50)

**46ಆತನು ಜನರ ಗುಂಪುಗಳ ಸಂಗಡ ಇನ್ನೂ ಮಾತಾಡುತ್ತಿರುವಾಗ ಆತನ ತಾಯಿಯೂ ತಮ್ಮಂದಿರೂ ಆತನನ್ನು ಮಾತಾಡಿಸಬೇಕೆಂದು ಹೊರಗೆ ನಿಂತಿದ್ದರು. ಆಗ ಒಬ್ಬನು**
**47ಇಗೋ, ನಿನ್ನ ತಾಯಿಯೂ ನಿನ್ನ ತಮ್ಮಂದಿರೂ ನಿನ್ನನ್ನು ಮಾತಾಡಿಸಬೇಕೆಂದು ಹೊರಗೆ ನಿಂತಿರುತ್ತಾರೆ ಅಂದನು.**
**48ಅದಕ್ಕಾತನು ಆ ಮಾತು ಹೇಳಿದವನಿಗೆ - ನನಗೆ ತಾಯಿ ಯಾರು? ನನಗೆ ಅಣ್ಣತಮ್ಮಂದಿರು ಯಾರು? ಎಂದು ಹೇಳಿ,**
**49ಶಿಷ್ಯರ ಕಡೆ ಕೈ ತೋರಿಸಿ - ಇಗೋ, ನನ್ನ ತಾಯಿ, ನನ್ನ ಅಣ್ಣತಮ್ಮಂದಿರು.**
**50ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ನನಗೆ ತಮ್ಮನೂ ತಂಗಿಯೂ ತಾಯಿಯೂ ಆಗಬೇಕು ಅಂದನು.**

ಇದಕ್ಕೆ ಸಮಾನವಾಗಿರುವ ಘಟನೆಯನ್ನು ಮಾರ್ಕ 3:31-35 ಮತ್ತು ಲೂಕ 8:19-21ರಲ್ಲಿ ಕಂಡುಕೊಳ್ಳುತ್ತೇವೆ. ಈ ಸುವಾರ್ತೆಗಳಲ್ಲಿ ಅನೇಕ ಕಡೆಗಳಲ್ಲಿ ಈ ಕಥೆ ಇರುವದರಿಂದ, ಯೇಸುವಿನ ಸೇವೆಯ ಕ್ರಮಾನುಸಾರವಾಗಿ ಇದರ ನಿರ್ಧಿಷ್ಟ ಸ್ಥಳವು ಯಾವ ಸ್ಥಳದಲ್ಲಿ ಆಗಿರುತ್ತದೆ ಎನ್ನುವದು ಅಸ್ಪಷ್ಟವಾಗಿದೆ. ನಿರಾಕರಿಸುವ ಉಪಕಥೆಗಳು ಹಾಗೆಯೇ ಮುಂದುವರಿಯುತ್ತಿರುತ್ತವೆ ಮತ್ತು ಈ ಅಧ್ಯಾಯದ ಮುಕ್ತಾಯದ ಮುಖ್ಯ ಅಂಶವೇನೆಂದರೆ ವಿರೋಧತ್ವವು ಯೇಸುವಿಗೆ ಸುತ್ತುವರಿದಿತ್ತು ಎಂದು ತಿಳಿದುಕೊಳ್ಳಬಹುದಾಗಿದೆ.

**ವಚನ 46.** ಯೇಸು ಜನರೊಂದಿಗೆ **ಮಾತಾಡುತ್ತಿರುವಾಗ, ಆತನ ತಾಯಿಯೂ ಮತ್ತು ತಮ್ಮಂದಿರೂ** ಆತನನ್ನು ನೋಡಲು ಬಂದರು ಆದರೆ ಆತನ ಹತ್ತಿರಹೋಗಲು ಅವರಿಗೆ ಕಷ್ಟಕರವಾಗಿತ್ತು (ಲೂಕ 8:19). ಇಲ್ಲಿಯವರೆಗೆ ಭೂಲೋಕದ ತಂದೆ ಎನಿಸಿಕೊಂಡಿರುವ ಯೋಸೆಫನನ್ನು ಸೂಚಿಸಿರುವದಿಲ್ಲ, ಬಹುಶಃ ಈ ಸಮಯದಲ್ಲಿ ಆತನು ಜೀವಂತವಾಗಿರದೆ ಈಗಾಗಲೇ ಸತ್ತು ಹೋಗಿರಬಹುದು ಎಂದು ನಂಬಲಾಗಿದೆ (ನೋಡಿರಿ ಯೋಹಾನ 19:25-27).

ಮರಿಯಳು ಮೊದಲ ಮಗನಾದ ಯೇಸುವನ್ನು ಜನ್ಮಕೊಟ್ಟ ತರುವಾಯ, ಆಕೆಯು ಇತರೆ ಮಕ್ಕಳನ್ನು ಪಡೆದಳು: ಆಕೆಯು ನಾಲ್ಕು ಮಕ್ಕಳನ್ನು ಪಡೆದಳು - ಯಾಕೋಬ, ಯೋಸೇಫ ಸಿಮೋನ, ಮತ್ತು ಯೂದ ಎಂಬುದಾಗಿ ಮತ್ತು ಕನಿಷ್ಟ ಇಬ್ಬರು ಹೆಣ್ಣು ಮಕ್ಕಳು ಇದ್ದರು ಎಂದು ಹೇಳುತ್ತಾರೆ (13:55, 56). ಕೆಲವರು ಹೀಗೆಂದು ಹೇಳುವರು ಮರಿಯಳ ಮಕ್ಕಳು ಇಲ್ಲವಾದರೆ ಯೋಸೆಫನು ಇನ್ನೊಂದು ಮದುವೆ ಮಾಡಿಕೊಂಡದ್ದರಿಂದ ಹುಟ್ಟಿದ ಮಕ್ಕಳು ಕ್ರಿಸ್ತನ ಚಿಕ್ಕಪ್ಪನ ಅಥವಾ ಚಿಕ್ಕಮ್ಮನ ಮಕ್ಕಳಾಗಿರಬಹುದೆಂದು ಹೇಳುವರು, ಆದರೆ ಈ ಹೇಳಿಕೆಯಿಂದ ಈ ಭಾಗದಲ್ಲಿ ಕಲಿಸಿರುವ ಸತ್ಯವು ಸ್ಪಷ್ಟವಾಗಿ ತಪ್ಪಿಹೋಗುವಂಥದ್ದಾಗಿದೆ. ಇಲ್ಲಿರುವ ಒಂದು ಸಲಹೆ ಎನೆಂದರೆ "ಸಹೋದರರು" ಎನ್ನುವ ಶಬ್ದವು ಸ್ಪಷ್ಟವಾಗಿ ಚಿಕ್ಕಪ್ಪ ಅಥವಾ ಚಿಕ್ಕಮ್ಮನ ಮಕ್ಕಳು ಎನ್ನುವದು ಗ್ರೀಕ್ ಶಬ್ದ (*adelphos*) ಇದನ್ನು ನಿರಾಕರಿಸುತ್ತದೆ ತಪ್ಪೆಂದು ಹೇಳುತ್ತದೆ. ಈ ಶಬ್ದವನ್ನು ಚಿಕ್ಕಪ್ಪನ ಅಥವಾ ಚಿಕ್ಕಮ್ಮನ ಮಕ್ಕಳು ಎಂದು ಹೇಳಲು ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಿರುವದಿಲ್ಲ. "ಚಿಕ್ಕಪ್ಪನ ಅಥವಾ ಚಿಕ್ಕಮ್ಮನ ಮಕ್ಕಳು" ಎಂದು ಕರೆಯಲು ಗ್ರೀಕ್ ಶಬ್ದ *anepsios* ಎಂಬುದಾಗಿದೆ. ಇದನ್ನು ಯೋಹಾನ ಮಾರ್ಕ ಮತ್ತು ಬಾರ್ನಬನ ಸಂಬಂಧವನ್ನು ವಿವರಿಸಲು ಇದನ್ನು ಉಪಯೋಗಿಸಿದೆ (ಕೊಲಸ್ಸೆ 4:10).

ನಿಜವಾಗಿಯೂ ಯೇಸುವಿನ ಕುಟುಂಬದವರು **ಆತನಿಗೆ ಮಾತನಾಡಿಸಲು** ಯಾಕೆ ಬಂದಿದ್ದರು ಎಂದು ಇಲ್ಲಿ ಹೇಳಿರುವದಿಲ್ಲ. ಏನೇ ಇದ್ದರೂ, ಮಾರ್ಕನು ಈ ಘಟನೆಗೆ ಸ್ವಲ್ಪ ಮುಂಚಿತವಾಗಿ ಅಲ್ಲಿ ನಡೆದಿರುವದನ್ನು ತಿಳಿಸಿದ್ದಾನೆ. ಅದೇನೆಂದರೆ, "ಆತನ ಬಂದುಗಳು ... ಆತನಿಗೆ ಹುಚ್ಚು ಹಿಡಿದಿದೆ" ಮತ್ತು "ಅವನನ್ನು ಹಿಡಿದು ಬಂದಿಸಬೇಕೆಂದು"

ಕೂಗಾಡಿ ಅದಕ್ಕಾಗಿ ಪ್ರಯತ್ನಿಸಿದರು (ಮಾರ್ಕ 3:21). ಆದುದರಿಂದ, ಬಹುಶಃ ಅವರು ಆತನಿಗೆ ತಿಳಿಹೇಳಲು ಬಂದಿರಬಹುದು ಆತನು ತನ್ನ ಬೋಧನೆಯನ್ನು ನಿಲ್ಲಿಸಿಬಿಟ್ಟು ತನ್ನ ಮನೆಗೆ ಹಿಂತಿರುಗಲು ಹೇಳುವದಕ್ಕಾಗಿ ಬಂದಿರಬಹುದು. ಯೋಹಾನನು ಹೇಳಿದಂತೆಯೇ "ಆತನ ಸಹೋದರರು ಸಹ ಆತನನ್ನು ನಂಬಲಿಲ್ಲ" (ಯೋಹಾನ 7:5). ಏನೇ ಆದರೂ, ಬಹುಶಃ ಪುನರುತ್ಥಾನದ ತರುವಾಯ ಅವರು ಅಂತ್ಯದಲ್ಲಿ ವಿಶ್ವಾಸಿಗಳಾಗಿರಬಹುದು (ಅಪೊಸ್ತಲರ ಕೃತ್ಯಗಳು 1:14; 1 ಕೊರಿಂಥ 9:5; 15:7). ಅವರ ಸಹೋದರರಲ್ಲಿ ಇಬ್ಬರು, ಯಾಕೋಬ ಮತ್ತು ಯೂದನು, ಅವರ ಹೆಸರನ್ನು ತಲೆಬರಹಮಾಡಿಕೊಂಡು ಪುಸ್ತಕಗಳನ್ನು ಬರೆದರು.

**ವಚನ 47.** ಅದರಿಂದ ಅವರು ಯೇಸುವಿನೆಡೆಗೆ ಹೋಗಲಿಲ್ಲ, ಕುಟುಂಬದವರು ಒಬ್ಬ ವ್ಯಕ್ತಿಯೊಡನೆ ನಿಮ್ಮ ಕುಟುಂಬದವರು **ಹೊರಗೆ ನಿಂತಿರುತ್ತಾರೆ** ಮತ್ತು ನಿನ್ನೊಂದಿಗೆ ಮಾತಾಡಬೇಕಿದೆ ಎಂದು ಹೇಳಿಕಳುಹಿಸಿದರು. ಬಹುಶಃ ಅವರು ಯೇಸು ಮಾಡುವದನ್ನೆಲ್ಲಾ ಬಿಟ್ಟು ಅವರ ಹಿಂದೆ ಬಂದು ಬಿಡುತ್ತಾನೆಂದು ಅವರು ಯೋಚಿಸಿರಬಹುದು, ಆದರೆ ಆತನು ಆ ರೀತಿಯಾಗಿ ಮಾಡಲಿಲ್ಲ. ಕೆಲವು ಗ್ರೀಕ್ ಭಾಷೆಯ ಕೈ ಬರಹಗಳಲ್ಲಿ ಈ ವಚನವನ್ನು ಸೇರಿಸಿರುವದಿಲ್ಲ (RSV ನೋಡಿರಿ) ಇದನ್ನು ಬಿಟ್ಟಿರುವದಕ್ಕೆ ಕಾರಣ "ಮಾತಾಡುವದಕ್ಕೆ" ಎಂದು ಅನುವಾದಿಸಿದ *lalēsai* ಶಬ್ದವು ಶಾಸ್ತ್ರಿಗಳ ಕಣ್ಣಿನಿಂದ ತಪ್ಪಿಹೋಗಿರಬಹುದು, ಈ ಮಾತು ವಚನ 46ರ ಅಂತಿಮದಲ್ಲಿ ಅದೇ ರೀತಿಯಾಗಿ ವಚನ 47ರ ಅಂತ್ಯದಲ್ಲಿಯೂ ಬಂದಿದ್ದರಿಂದ ಅದನ್ನು ಬಿಟ್ಟಿರಬಹುದು ಎಂದು ಹೇಳಲಾಗುತ್ತದೆ.[5]

**ವಚನಗಳು 48-50.** ಕರ್ತನು ಅವರಿಗೆ, **ನನ್ನ ತಾಯಿಯೂ ಯಾರು ಮತ್ತು ನನ್ನ ಸಹೋದರರು ಯಾರು?** ಎಂಬ ಪ್ರಶ್ನೆಯನ್ನು ಕೇಳಿದನು. ಅವರ ಬೇಡಿಕೆಗೆ ಯೇಸುವಿನ ಪ್ರತಿಕ್ರಿಯೆ ಅವನು ತನ್ನ ತಾಯಿಗೆ ಮತ್ತು ತನ್ನ ಸಹೋದರರಿಗೆ ಅಗೌರವವನ್ನು ತೋರಿಸುವಂತೆ ಕಾಣಿಸುವದಿಲ್ಲ. ಯೇಸು ತನ್ನ ತಾಯಿಯ ಕುರಿತು ಆಳವಾದ ಶ್ರದ್ಧೆಯನ್ನು ಹೊಂದಿದ್ದನು ಮತ್ತು ಆತನು ಅವಳ ಕ್ಷೇಮಾಭಿವೃದ್ಧಿಯ ಕುರಿತು ಕಳಕಳಿಯುಳ್ಳವನಾಗಿದ್ದನು (ಲೂಕ 2:51; ಯೋಹಾನ 2:3-11; 19:25-27; ನೋಡಿರಿ ಮತ್ತಾಯ 15:3-6) ಮತ್ತು ಅದನ್ನು ಆಗಾಗ್ಗೆ ಪ್ರದರ್ಶಿಸಿದ್ದನು. ಏನೇ ಆದರೂ, ಈ ಸಂದರ್ಭದಲ್ಲಿ, ಆತನ ದೈವಿಕ ಮತ್ತು ಮಾನವ ಕರ್ತವ್ಯನಿಷ್ಟೆಯ ಬಗ್ಗೆ ಘರ್ಷಣೆ ಎದ್ದಿತು ಆತನು ತಕ್ಷಣ ತನ್ನ ಪ್ರಥಮ ಆಧ್ಯತೆಯನ್ನು ದೈವಿಕತೆಗೆ ನೀಡಿದನು.

**ಯೇಸು ತನ್ನ ಶಿಷ್ಯರ** ಕಡೆಗೆ ತಿರುಗಿಕೊಂಡು ಅವರು ತನ್ನ ನಿಜವಾದ ಕುಟುಂಬವಾಗಿದ್ದಾರೆಂದು ಪ್ರಕಟಿಸಿದನು. ಮತ್ತೆ ಆತನು **ಪರಲೋಕದಲ್ಲಿರುವ [ಆತನ] ತಂದೆಯ ಚಿತ್ತದಂತೆ** ನೆರವೇರಿಸುವ (ನೋಡಿರಿ 7:21) ಯಾವುದೇ ವ್ಯಕ್ತಿ ತನ್ನೊಂದಿಗೆ ಕುಟುಂಬದ ಸಂಬಂಧವನ್ನು ಹೊಂದಿದ್ದಾನೆ: **ನನ್ನ ಸಹೋದರನು ಮತ್ತು ಸಹೋದರಿಯು ಮತ್ತು ನನ್ನ ತಾಯಿಯು ಆಗುವರು ಎಂದು ಯೇಸು ಹೇಳಿದನು.** ಪಟ್ಟಿಯಲ್ಲಿ "ತಂದೆ" ಎಂಬ ಪದ ಕಾಣಿಸುವದಿಲ್ಲ, ಯಾಕಂದರೆ ತಂದೆ ಎಂಬ ಪದವನ್ನು ದೇವರಿಗೆ ಕಾಯ್ದಿರಿಸಲಾಗಿದೆ (23:9; ಎಫೆಸ 4:4-6). "ಸಹೋದರಿ" ಮತ್ತು "ತಾಯಿ" ಎಂಬ ಉಲ್ಲೇಖಗಳು ಯೇಸು ತನ್ನ ಸಮಕಾಲೀನವರಂತೆ ಹೆಣ್ಣುಮಕ್ಕಳನ್ನು ಸಹ ತನ್ನ ಶಿಷ್ಯರನ್ನಾಗಿ ಆಮಂತ್ರಿಸಿದ್ದನು ಎಂಬುದನ್ನು ಪ್ರಟಿಸುತ್ತದೆ. ಹೆಣ್ಣುಮಕ್ಕಳು ಯೇಸುವಿಗೆ ತಮ್ಮ ಹಣದ ಮೂಲಕ ಬೆಂಬಲಿಸಿದರು (ಲೂಕ 8:1-3), ಮತ್ತು ಆತನು ಅವರಿಗೆ ಬೋಧಿಸಲು ಹಿಂಜರಿಯಲಿಲ್ಲ (ಲೂಕ 10:38-42; ಯೋಹಾನ 4:7-30).[6]

ಈ ವಚನದಿಂದ ಎರಡು ಪ್ರಾಮುಖ್ಯವಾದ ಸತ್ಯಗಳನ್ನು ತೆಗೆದುಕೊಳ್ಳಬಹುದು. ಮೊದಲನೆಯದಾಗಿ, ಯೇಸು ತನ್ನ ಇಹಲೋಕದ ಕುಟುಂಬದವರು ತನ್ನ ದೈವೀಕ ಸೇವೆಯ ನೇಮಕದಿಂದ ಆತನ ದಿಕ್ಕನ್ನು ಬೇರೆ ಕಡೆ ಎಳೆಯುವದಕ್ಕೆ ಅವಕಾಶ ಕೊಡಲಿಲ್ಲ (ನೋಡಿರಿ

ಯೋಹಾನ 2:4; 7:6). ಎರಡನೆಯದಾಗಿ, ಆತ್ಮೀಕ ಬಂಧನವು ತನ್ನ ಸ್ವಂತ ದೈಹೀಕ ಕುಟುಂಬದ ಬಂಧನಕ್ಕಿಂತ ಹೆಚ್ಚು ಸಮೀಪವಾಗಿತ್ತು (ನೋಡಿರಿ 8:21, 22; 10:34-37).

## ಪಾಠಗಳು

### ಎಲ್ಲಾ ಸೂಚಕಕಾರ್ಯಕ್ಕಿಂತ ಶ್ರೇಷ್ಟವಾದ ಸೂಚಕಕಾರ್ಯ (12:39, 40)

ಯೇಸುವಿನ ಪುನರುತ್ಥಾನವು ಎಲ್ಲಾದಕ್ಕಿಂತಲೂ ಶ್ರೇಷ್ಟವಾದ ಸೂಚಕ ಕಾರ್ಯವಾಗಿದೆ, ಏಕೆಂದರೆ ಅದು ಆತನು ನಿಜವಾಗಿ ದೇವರ ಮಗನು ಎಂಬುದನ್ನು ಸಿದ್ಧಾಂತಪಡಿಸಿತು. ಯೇಸು "ಬಲದೊಂದಿಗೆ ಸತ್ತವರೊಳಗಿಂದ ಎದ್ದುಬರುವದರ ಮೂಲಕ ತಾನು ದೇವರ ಮಗನು ಎಂಬುದನ್ನು ಸಿದ್ಧಾಂತಪಡಿಸಿದನು" ಎಂದು ಪೌಲನು ಹೇಳುತ್ತಾನೆ (ರೋಮಾಪುರ 1:4). ಕ್ರೈಸ್ತ ನಂಬಿಕೆ ಪುನರುತ್ಥಾನದ ಸತ್ಯದ ಮೇಲೆ ಅವಲಂಬಿಸಿದೆ: ನಾವು ಮರಣದಿಂದ ಎದ್ದು ಬಂದಿರುವ ರಕ್ಷಕನನ್ನು ಸೇವಿಸುತ್ತಿದ್ದೇವೆ ಆತನು ದೇವರ ಬಲ ಪಾರ್ಶ್ವದಲ್ಲಿ ಮಹಿಮೆಯಿಂದ ಕೂಡಿದವನಾಗಿದ್ದಾನೆ! ಇಲ್ಲಿರುವ ಅಂಶವೇನೆಂದರೆ ಯೇಸು ಮೊದಲು ಸಮಾದಿಯಿಂದ ಹೊರಗೆ ಬಂದು ನಮಗೆ ಒಂದು ಭರವಸೆ ಕೊಟ್ಟಿದ್ದಾನೆ ಏನೆಂದರೆ ನಿಶ್ಚಯವಾಗಿ ಆತನು ಹಿಂತಿರುಗಿ ಬರುವಾಗ ನಾವು ಸಹ ದೈಹಿಕ ಪುನರುತ್ಥಾನವಾಗುತ್ತೇವೆ ಎನ್ನುವಂಥದ್ದು (1 ಕೊರಿಂಥ 15:20-28, 50-58). David Stewart

### ಯೋನನ ಐತಿಹಾಸಿಕತೆ (12:40)

ಅನೇಕ ಉದಾರ ಮನಸ್ಸಿನ ಪಂಡಿತರು ಕಳೆದ ಎರಡು ಶತಮಾನಗಳಿಂದ ಯೋನನ ಅನುಭವದ ಐತಿಹಾಸಿಕತೆಯನ್ನು ನಿರ್ಲಕ್ಷಿಸುತ್ತಾ ಬಂದಿದ್ದಾರೆ. ಅವರು ಆ ಕಥೆಯನ್ನು ಒಂದು ದಂಥಕಥೆಯಂತೆ ಅವಲೋಕಿಸಿದ್ದಾರೆ, ಅದನ್ನು ಒಂದು ಸಾಮ್ಯ ಸೂಚಿಸುತ್ತದೆಂದು, ಅದು ಒಂದು ರೂಪಕ ಕಥೆಯೆಂಬಂತೆ ಅವರು ಅವಲೋಕಿಸಿದ್ದಾರೆ. ಏನೇ ಆದರೂ, ಯೋನನ ಪುಸ್ತಕವನ್ನು ಸರಿಯಾಗಿ ಓದುವದರಿಂದ ಇಂಥಹ ವಿಷಯಗಳು ಅಲ್ಲಿ ಪ್ರತಿನಿದಿಸುವ ಸಾಧ್ಯತೆ ಇಲ್ಲ. ಇನ್ನು ಹೆಚ್ಚಾಗಿ, ಅವರು ಮತ್ತಾಯ 12:40ರಲ್ಲಿರುವ ವ್ಯಾಖ್ಯಾನವನ್ನು ನಿರ್ಲಕ್ಷಿಸಿದರು. ಆತನು ಯೋನನ ಇತಿಹಾಸದ ಘಟನೆಯನ್ನು ತನ್ನ ಸ್ವಂತ ಪುನರುತ್ಥಾನದ ರೀತಿಯಲ್ಲಿದೆ ಎಂದು ಹೇಳಿದ್ದಾನೆ. ಒಂದು ವೇಳೆ ಯೋನನು ಸಮುದ್ರ ಪ್ರಾಣಿಯಿಂದ ನುಂಗದೆ ಹೋಗಿದ್ದರೆ, ಕರ್ತನ ಈ ವಿಷಯದಲ್ಲಿ ಸುಳ್ಳುಗಾರನೆಂದು ಸೂಚಿಸುತ್ತದೆ. ಮುಂದೆ, ಆತನ ಪುನರುತ್ಥಾನದ ವಿಶ್ವಾಸ ಅರ್ಹತೆಯನ್ನು ಬಲಹೀನಪಡಿಸುತ್ತದೆ ಅಂದರೆ ಕಡಿಮೆಗೊಳಿಸುತ್ತದೆ. ಪುನರುತ್ಥಾನವಿಲ್ಲದೆ ಅಪೊಸ್ತಲರಿಗೆ ಯಾವುದರ ಮೇಲೆ ನಿಲ್ಲಲು ಆಗುವದಿಲ್ಲ ಅಂದರೆ ಪುನರುತ್ಥಾನವೇ ಮುಖ್ಯವಾದ ಸಂಗತಿಯಾಗಿದೆ. ಪೌಲನು ಹೀಗೆ ಬರೆದಿದ್ದಾನೆ, "ಕ್ರಿಸ್ತನು ಎದ್ದುಬರಲಿಲ್ಲವಾದರೆ ನಿಮ್ಮ ನಂಬಿಕೆಯು ನಿಷ್ಪ್ರಯೋಜನವಾಗಿದೆ, ನೀವು ಇನ್ನೂ ನಿಮ್ಮ ಪಾಪಗಳಲ್ಲಿಯೇ ಇದ್ದೀರಿ" ಎಂಬುದಾಗಿದೆ (1 ಕೊರಿಂಥ 15:17).

David Stewart

### ಮನೆಗೆ ಬರುವದನ್ನು ಸೈತಾನನು ಪ್ರೀತಿಸುತ್ತಾನೆ (12:43-45)

ಯೇಸುವಿನ ದಿನಗಳಲ್ಲಿ ಜನರು ದೆವ್ವಗಳ ಕುರಿತು ಚೆನ್ನಾಗಿ ತಿಳುಕೊಂಡಿದ್ದರು. 12:43-45ರಲ್ಲಿ ಆತನು ದೆವ್ವಗಳ ಕುರಿತು ಸಾಮ್ಯವನ್ನು ಹೇಳಿದ್ದಾನೆ, ಖಾಲಿಯಾದ ಮನೆಗಳನ್ನು ಖಾಲಿಯಾದ ಜೀವಿತಕ್ಕೆ ಹೋಲಿಸಿದ್ದಾನೆ. ಇಂಥಹ ಒಂದು ಶರತ್ತುಗಳ ಅಡಿಯಲ್ಲಿ ಸೈತಾನನು ಕೆಲಸಮಾಡಲು ಇಷ್ಟಪಡುವವನಾಗಿದ್ದಾನೆ. ಮೊದಲು ಅವನು

ಸತ್ಯವೇದ ಸೇರಿಕೊಂಡಿದ್ದೆ ಮೋಸಗಾರನೆಂಬುದಾಗಿ "ಅತೀಕಪಟ [ಮಾರ್ಮಿಕ; ASV] ಎಲ್ಲಾ ಜಂತುಗಳಲ್ಲಿ ಇದು ಕಪಟಯುಳ್ಳದ್ದಾಗಿತ್ತು" (ಆದಿಕಾಂಡ 3:1). ಅವನ ಶ್ರೇಷ್ಟವಾದ ಮೋಸಕರ ಸಾಮರ್ಥ್ಯ ಅದು ಮಾನವರ ಆಸೆಗಳಿಗೆ ಸಮಸ್ಯೆಯನ್ನುಂಟು ಮಾಡುವದು ಇಡಿ ಎಲ್ಲಾ ವರ್ಷಗಳಲ್ಲಿ ತನ್ನನ್ನು ತೋರಿಸಿಕೊಳ್ಳದೆ ಅದನ್ನು ಗಂಭೀರವಾಗಿ ತೆಗೆದುಕೊಳ್ಳದೆ ಅವರಿಗೆ ಅಡ್ಡಿಯನ್ನುಂಟು ಮಾಡುವದೇ ಆಗಿತ್ತು. ಈ ಸಾಮ್ಯದಲ್ಲಿ, ಯೇಸು ಸೈತಾನನ ನಡವಳಿಕೆ ಕುರಿತಾಗಿ ಸಂಕ್ಷಿಪ್ತವಾಗಿ ಬಲವಾದ ಹೇಳಿಕೆಯನ್ನು ಕೊಟ್ಟಿದ್ದಾನೆ. ಸೈತಾನನು ಕೇವಲ ವಾಸ್ತವವಾಗಿರದೆ ಅವನು ಜಿಗಟಿನ ತರಹ ಹಿಡಿದುಕೊಳ್ಳುವವನಾಗಿದ್ದಾನೆ. ಅವನು ಮನೆಗೆ ಬರುವದನ್ನು ಪ್ರೀತಿಸುತ್ತಾನೆ; ಅವನು ಖಾಲಿ ಸ್ಥಳವನ್ನು ಸ್ವಾದೀನಮಾಡಿಕೊಳ್ಳಲು (ಒಬ್ಬ ವ್ಯಕ್ತಿಯ ಜೀವಿತ) ಇಷ್ಟಪಡುವವನಾಗಿದ್ದಾನೆ.

## ಕೆಟ್ಟತನವನ್ನು ಒಳ್ಳೆತನದೊಂದಿಗೆ ಸ್ಥಾನಪಲ್ಲಟಗೊಳಿಸು (12:43-45)

ಯಾಕೋಬನು ಹೀಗೆ ಬರೆದಿದ್ದಾನೆ, "ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿ ಹೋಗುವನು" (ಯಾಕೋಬ 4:7). ಅವನು ತಾತ್ಕಾಲಿಕವಾಗಿ ಓಡಿಹೋಗ ಬಹುದು, ಆದರೆ ಒಬ್ಬನು ಎಲ್ಲಿ ಜೀವಿಸುತ್ತಿದ್ದಾನೋ ಎಂಬುದನ್ನು ಅವನು ಮರೆಯುವದಿಲ್ಲ! ಸೈತಾನನು ವೈಯಕ್ತಿಕವಾಗಿ ಶೋಧನೆ ಮಾಡುವದು ಬಿಟ್ಟುಬಿಡುವದಿಲ್ಲ ಯಾಕೆಂದರೆ ಯೇಸು ಕ್ರಿಸ್ತನಿಗೆ ಒಂದು ಸಾರಿ ಬಿಟ್ಟುಬಿಟ್ಟಿದ್ದಾನೆ. ಕೆಟ್ಟತನವನ್ನು ತೆಗೆದುಹಾಕುವದರಿಂದ ಸ್ಥಳವನ್ನು ಸ್ವಚ್ಛಮಾಡಿ ಒಳ್ಳೆಯದನ್ನು ಉತ್ಪಾದಿಸಲು ಸಾಧ್ಯವಾಗುತ್ತದೆ. ಈ ಸಾಮ್ಯದಲ್ಲಿ ಯಾವಾಗ ದೆವ್ವವು ಖಾಲಿಯಾದ ತನ್ನ ಹಿಂದಿನ ಮನೆಯನ್ನು ಕಂಡುಕೊಂಡಿತೋ, ಆಗ ಆ ದೆವ್ವವು ಇನ್ನು ಏಳು ದೆವ್ವಗಳನ್ನು ತನ್ನ ಜೊತೆಗೆ ಕರೆದುಕೊಂಡು ಮನೆಗೆ ಹಿಂತಿರುಗುತ್ತದೆ.

ಖಾಲಿಯಾದ ಸ್ಥಳ ಬಹಳ ದಿನಗಳ ಕಾಲ ಹಾಗೆಯೇ ಉಳಿಯುವದಿಲ್ಲ. ಯಾವಾಗ ಕೆಟ್ಟತನವನ್ನು ಅಲ್ಲಿಂದ ತೆಗೆದುಹಾಕಲ್ಪಟ್ಟಿದೆಯೋ, ತಕ್ಷಣವೇ ಆ ಸ್ಥಳವನ್ನು ಉತ್ತಮವಾದ ಅಂಶಗಳಿಂದ ತುಂಬಿಸಬೇಕು. ಒಬ್ಬನು ಸೈತಾನನ್ನು ದೂರವಿಡಲು ದೇವರ ಉದ್ದೇಶಕ್ಕೂ ಮತ್ತು ಕಾರ್ಯಗತವಾಗಿ ದೇವರಿಗೆ ಸಮರ್ಪಣೆ ಮಾಡಿಕೊಳ್ಳಬೇಕು.

## "ದೆವ್ವಗಳನ್ನು" ಹೇಗೆ ಹೊರಗಡೆ ಹಾಕಬೇಕು (12:43-45)

ಇಂದಿನ ದಿನಗಳಲ್ಲಿ ದೆವ್ವಗಳು ಮನುಷ್ಯರಲ್ಲಿ ವಾಸಮಾಡುವದಿಲ್ಲ, ಆದರೆ ಸೈತಾನನು ನಮ್ಮ ವಿರುದ್ಧವಾಗಿ ತನ್ನ ಬಲ, ಪ್ರಭಾವಗಳನ್ನು ಉಪಯೋಗಿಸುತ್ತಾನೆ. ಅವನ ಕಾರ್ಯಕ್ರಮಗಳು ಅನೇಕ ವಾಕ್ಯಭಾಗಗಳಲ್ಲಿ ನಮಗೆ ಪ್ರತಿಬಿಂಬಿಸುತ್ತದೆ (ಲೂಕ 8:12; 2 ಕೊರಿಂಥ 2:11; ಎಫೆಸ 6:11-16; 1 ಥೆಸಲೋನಿಕ 2:18; 1 ತಿಮೊಥೆ 3:6, 7; 2 ತಿಮೊಥೆ 2:26). ಸೈತಾನನನ್ನು ಎದುರಿಸಲೇಬೇಕು (ಯಾಕೋಬ 4:7; ನೋಡಿರಿ ಮತ್ತಾಯ 16:21-23; ಲೂಕ 22:31, 32; ಎಫೆಸ 4:27; 1 ಪೇತ್ರನು 5:8).

*ಈ "ದೆವ್ವಗಳು" ಏನಾಗಿವೆ?* (1) ಮೋಸಗೊಳಿಸುವ ದೆವ್ವ, (2) ನಿರಾಶೆಗೊಳಿಸುವ ದೆವ್ವ, (3) ಭಾವನಾರಹಿತ ದೆವ್ವ, ಮತ್ತು (4) ವಿಳಂಬ ಪ್ರವೃತ್ತಿಯನ್ನುಂಟುಮಾಡುವ ದೆವ್ವ.

*ಅವುಗಳನ್ನು ನಾವು ಹೇಗೆ "ಬಿಡಿಸಬೇಕು?"* (1) ದೇವರಿಗೆ ಹತ್ತಿರವಾಗಿರುವದರಿಂದ, (2) ದೇವರಿಗಾಗಿ ಯಾವಾಗಲು ಕಾರ್ಯನಿರತರಾಗಿರುವದರಿಂದ, ಮತ್ತು (3) ದೇವರ ವಾಕ್ಯವೆಂಬ ಖಡ್ಗವನ್ನು ತಿರುಗಿಸುವದರಿಂದ.

ಸೈತಾನನು ನಮ್ಮನ್ನು ನಮ್ಮ ಜೀವಿತಗಳನ್ನು ಸೋಸುವಾಗ ನಾವು ಅದರ ವಿರುದ್ಧವಾಗಿ ಏನನ್ನು ಮಾಡದೆ ಇರುವದೇ ನಾವು ಮಾಡುವ ದೊಡ್ಡ ತಪ್ಪು. ಒಳ್ಳೆಯ ಜನರು ಸೋಮಾರಿ ಗಳಾಗಿ ಮಾಡಿ ಅವರು ತನ್ನ ವಿರುದ್ಧವಾಗಿ ಏನನ್ನು ಮಾಡದೆ ಇರುವದು ಸೈತಾನನಿಗೆ ಇಷ್ಟವಾಗಿದೆ ಅವನು ಈ ವಿಷಯದಲ್ಲಿ ಒಳ್ಳೆಯವರನ್ನ ಗೆಲ್ಲುತ್ತಾನೆ. ನಾವು ದೇವರ ಕಡೆಗೆ

ಓಡಿದರೆ, ಸೈತಾನನು ನಮ್ಮಿಂದ ಓಡಿಹೋಗುವನು.

## ಮರಿಯಳ ಆರಾಧನೆ (12:46-50)

ಇಂದಿನ ದಿನಗಳಲ್ಲಿ ಮರಿಯಳ ಆರಾಧನೆ ಬಹಳಷ್ಟು ಹೆಚ್ಚಿನ ರೀತಿಯಲ್ಲಿ ಕೆಲವು ಧಾರ್ಮಿಕ ಗುಂಪಿನಿಂದ ಯೋಗ್ಯವಲ್ಲದ ರೀತಿಯಲ್ಲಿ ದೇವದೂಷಣೆಯಾಗುವ ರೀತಿಯಲ್ಲಿ ಆರಾಧಿಸುತ್ತಿದ್ದಾರೆ. ಪರಿಶುದ್ಧವಾದ ಪರಿಕಲ್ಪನೆಯ ಸಿದ್ಧಾಂತವು ತಾವು ಮಾಡುವದೇ ಸರಿ ಎಂದು ಒಪ್ಪಿಕೊಳ್ಳುತ್ತಾರೆ, ಮರಿಯಳು "ದೇವರ ತಾಯಿ" ಯಾಗಿದ್ದರೂ ಸಹ ಸ್ವಂತ ಮರಿಯಳೇ ದೇವರಿಗೆ ಭಯಭಕ್ತಿಯಿಂದ ಇದ್ದಳು ಮತ್ತು ಅದ್ಭುತವಾದ ಜನನದ ಮುಖಾಂತರ ಈ ಲೋಕದಲ್ಲಿ ಪ್ರವೇಶಿಸಿದಳು. ತಪ್ಪಾದ ಪರಿಚಯ ಅಭಿಪ್ರಾಯದಿಂದ, ಜನರು ಆಕೆಗೆ ಆರಾಧಿಸುತ್ತಾರೆ ಮತ್ತು ಆಕೆಗೆ ಸರ್ವಶ್ರೇಷ್ಟವಾದ ಶಕ್ತಿಯಿದೆ ಎಂದು ಅಭಿಪ್ರಾಯ ಹೊಂದುವವರು ಇದ್ದಾರೆ. ಯೇಸುವಿನ ಸೇವೆಯಲ್ಲಿ ಇದು ಒಂದು ಅವಶ್ಯವಿಲ್ಲದ ಕಾರ್ಯವಾಗಿತ್ತು ಇದನ್ನು 12:46-50 ನೋಡುತ್ತೇವೆ ಇದರಲ್ಲಿರುವ ಒಂದು ಸೂಚನೆ ಏನೆಂದರೆ ಮರಿಯಳು ಯಾವುದೇ ವ್ಯಕ್ತಿಗಿಂತ ಶ್ರೇಷ್ಟವಾದ ಸ್ಥಾನವನ್ನು ಆಕೆ ಹೊಂದಿಕೊಳ್ಳಲಿಲ್ಲ.

## ದೇವರ ಕುಟುಂಬ (12:46-50)

ದೇವರ ಕುಟುಂಬದ ಸದಸ್ಯರಾಗುವದು ಶ್ರೇಷ್ಟವಾದ ಆಶೀರ್ವಾದವಾಗಿದೆ. ನಮಗೆ ದೇವರು ತಂದೆಯಂತೆ ಮತ್ತು ಯೇಸು ನಮ್ಮ ದೊಡ್ಡ ಸಹೋದರನಂತೆ ಇದ್ದಾನೆ (ರೋಮಾಪುರ 8:14-16; ಇಬ್ರಿಯ 2:10-18). ನಮಗೆ ಬೋಧಿಸಲು, ಉತ್ತೇಜನ ಕೊಡಲು, ಮತ್ತು ಪ್ರೋತ್ಸಾಹ ಮಾಡಲು ನಮಗೆ ಸಹೋದರ ಮತ್ತು ಸಹೋದರಿಯರು ನಮಗಿದ್ದಾರೆ. ನಮ್ಮ ಜಯದ ಕಾರ್ಯಗಳು ಮತ್ತು ಸೋಲುಗಳು ಒಬ್ಬರಿಗೊಬ್ಬರು ಹಂಚಿಕೊಳ್ಳಬೇಕು, ಮತ್ತು ನಾವು ಒಂದಾಗಿ ಅಳಬಹುದು ಮತ್ತು ಒಂದಾಗಿ ನಗಲು ಬಹುದು (ರೋಮಾಪುರ 12:15). ಆತ್ಮೀಕವಾಗಲಿ ಅಥವಾ ದೈಹಿಕವಾಗಲಿ ನಮಗೆ ಸಂಕಷ್ಟ ಸಮಯಗಳಲ್ಲಿ ಒಬ್ಬರಿಗೊಬ್ಬರು ಉತ್ತೆಜನ ಪ್ರೋತ್ಸಾಹ ಕೊಡುವವರಾಗಿರಬೇಕು (ಗಲಾತ್ಯ 6:1, 2, 10). ದೇವರ ಕುಟುಂಬ ಪ್ರತಿಯೊಬ್ಬರು ಸದಸ್ಯರಿಗೆ ಅರ್ಥಪೂರ್ಣವಾಗಿದೆ, ಯಾರಿಗೆ ಶಾರೀರಿಕ ಕುಟುಂಬವಿಲ್ಲವೋ ಮತ್ತು ಯಾರ ಕುಟುಂಬದಲ್ಲಿ ವಿಶ್ವಾಸವನ್ನು ಹಂಚಿಕೊಳ್ಳುವದಿಲ್ಲವೋ ಅಂಥವರಿಗೆ ದೇವರ ಕುಟುಂಬವು ಆಶ್ರಯವಾಗಿದೆ. David Stewart

---

ಟಿಪ್ಪಣೆಗಳು

[1]Jack P. Lewis, *The Gospel According to Matthew,* Part 1, The Living Word Commentary (Austin, Tex.: Sweet Publishing Co., 1976), 178. [2]Talmud *Pesahim* 4a; *Nazir* 5b. [3]Lewis, 179. [4]ನೋಡಿರಿ Tobit 8:3; Baruch 4:35. [5]Bruce M. Metzger, *A Textual Commentary on the Greek New Testament,* 2d ed. (Stuttgart: German Bible Society, 1994), 26–27. [6]ಇದಕ್ಕೆ ಭಿನ್ನವಾಗಿ, ಯೆಹೂದ್ಯ ಗುರುಗಳು ಪುರುಷರಿಗೆ ಎಚ್ಚರಿಕೆ ನೀಡಿದ್ದಾರೆ ಅದೇನೆಂದರೆ, "ಹೆಂಗಸರೊಂದಿಗೆ ಹೆಚ್ಚಾಗಿ ಮಾತಾಡಬಾರದು" ಎಂಬುವಂಥದ್ದು. ಅವರು ಹೇಳಿದ್ದು "ಪುರುಷನು ಸ್ತ್ರೀಯೊಂದಿಗೆ ಹೆಚ್ಚಾಗಿ ಮಾತಾಡುವದರಿಂದ, (1) ಅವನು ತನ್ನ ಮೇಲೆ ಸಮಸ್ಯೆಗಳನ್ನು ತಂದುಕೊಳ್ಳುತ್ತಾನೆ, (2) ಪಂಚಕಾಂಡದ ಅಭ್ಯಾಸ ಮಾಡುವ ಸಮಯವನ್ನು ಹಾಳು ಮಾಡುತ್ತದೆ, ಮತ್ತು (3) ಒಬ್ಬನು ಗೆಹೆನಾದ ವಾರಸದಾರನಾಗುತ್ತಾನೆ." (Mishnah *Aboth* 1.5.)